ಉ) ಇಲ್ಲವಾದರೆ ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಕೆ. ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ಸತ್ತ ಪ್ರಾಣಿಗಳ ಸಂಖ್ಯೆ 27

ಆ) ಅಸ್ವಾಭಾವಿಕ ಕಾರಣಗಳಿಂದ ನಾವು ಉಂಟಾಗಿರುವ ಬಗ್ಗೆ ವರದಿ ಆಗಿರುವುದಿಲ್ಲ

ಇ) ಉದ್ಭವಿಸುವುದಿಲ್ಲ

ಈ) ಹೌದು

ಉ) ಉದ್ಭವಿಸುವುದಿಲ್ಲ

ರಸ್ತೆ ನಿರ್ಮಾಣ ನಿಗಮ ಕುರಿತು

1052 (1050) ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಮಾನ್ಯ ಲೋಕೋಪಯೋಗಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಸ್ತೆ ನಿರ್ಮಾಣ ನಿಗಮ ಅಸ್ತಿತ್ವಕ್ಕೆ ಬಂದ ನಂತರ ಲೋಕೋಪಯೋಗಿ ಇಲಾಖೆಯ ಕೆಲಸಕ್ಕೆ ಒತ್ತಡ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ ಅನಾವಶ್ಯಕವಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು?

ಇ) ಮೈಸೂರು ನಗರ ಮತ್ತು ತಾಲ್ಲೂಕಿನಲ್ಲಿ ಎಷ್ಟು ಕಛೇರಿಗಳನ್ನು ಮುಚ್ಚುವ ಉದ್ದೇಶ ಸರ್ಕಾರಕ್ಕೆ ಇದೆ;

ಈ) ಈ ರೀತಿ ಮುಚ್ಚಲಾಗಿರುವ ಸರ್ಕಾರಿ ಸಿಬ್ಬಂದಿಯ ಸೇವೆಯನ್ನು ಬೇರೆ ಯಾವ ರೀತಿಯಲ್ಲಿ ಬಳಸಿಕೊಳ್ಳಲಾಗುವುದು;

ಉ) ಮೈಸೂರು- ಬೆಂಗಳೂರು ನಡುವಿನ ಎಕ್ಸ್‌ಪ್ರೆಸ್ ಹೈವೇ ಕಾರಿಡಾರ್‌ಗಳನ್ನು ಶೀಘ್ರವೇ ಜಾರಿಗೊಳಿಸಲಾಗುವುದು ಎಂಬ ಆಶ್ವಾಸನೆಯನ್ನು ಪದೇ ಪದೇ ನೀಡಿದಾಗ್ಯೂ ಯಾವುದೇ ರೀತಿ ಪ್ರಗತಿ ಕಂಡು ಬರುತ್ತಿಲ್ಲ ಮತ್ತು ಇದನ್ನು ಯಾವಾಗ ಪ್ರಾರಂಭಿಸಿ ಮುಗಿಸಲು ಹಾಕಿಕೊಂಡಿರುವ ಕಾಲಮಿತಿ ಏನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಕರ್ನಾಟಕ ರಸ್ತೆ ನಿರ್ಮಾಣ ನಿಗಮ ಅಸ್ತಿತ್ವಕ್ಕೆ ಬಂದನಂತರ ಲೋಕೋಪಯೋಗಿ ಇಲಾಖೆಯ ಕಾರ್ಯದ ಒತ್ತಡದ ಮೇಲೆ ಯಾವುದೇ ಪರಿಣಾಮ ಬೀರಿರುವುದಿಲ್ಲ.

ಆ) 'ಅ'ನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಇ) ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ ಸರ್ಕಾರ ಮುಂದೆ ಈ ರೀತಿ ಯಾವುದೇ

ಪ್ರಸ್ತಾವನೆ ಇರುವುದಿಲ್ಲ.

ಈ) 'ಇ'ನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಉ) ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಯೋಜನೆಯನ್ನು ಕೇಂದ್ರ ಸರ್ಕಾರದ ಪರಿಸರ ಇಲಾಖೆ ವತಿಯಿಂದ ಮಂಜೂರಾತಿ ದೊರೆತ ಕೂಡಲೇ ಪ್ರಾರಂಭಿಸಲಾಗುವುದು. ಇದರ ಜೊತೆಗೆ ರಾಜ್ಯ ಸರ್ಕಾರದ ವತಿಯಿಂದ ಕರ್ನಾಟಕ ನಗರ ಮತ್ತು ಪರಸಭೆ ಕಾಯ್ದೆ 18ಎ ತಿದ್ದುಪಡಿ ಅನ್ವಯ ಹಾಗೂ ಪುನರ್ವಸತಿ ಮತ್ತು ಪುರ್ನನಿರ್ಮಾಣ ಪ್ರಸ್ತಾವನೆಗಳಿಗೆ ಒಪ್ಪಿಗೆಗಳನ್ನು ನಿರೀಕ್ಷಿಸಲಾಗಿದೆ.

ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಸಂಸ್ಥೆಯು ಈಗಾಗಲೇ ಯೋಜನೆಗೆ ಅವಶ್ಯಕವೆನಿಸಿದ ತಾಂತ್ರಿಕ ಮತ್ತು ಆರ್ಥಿಕ ಪ್ರಸ್ತಾವನೆಗಳಿಗೆ ಒಪ್ಪಿಗೆ ಪಡೆಯಲಾಗಿದ್ದು. ಯೋಜನೆಯ ಪ್ರಥಮ ಹಂತವನ್ನು ಪಡೆಯಲಾಗಿದ್ದು, ಯೋಜನೆಯ ಪ್ರಥಮ ಹಂತವನ್ನು ಮೂರು ವರ್ಷಗಳಲ್ಲಿ ಪೂರ್ಣಗೊಳಿಸಲು ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಉಳಿದ ಯೋಜನೆಯ ಇನ್ನೆರಡು ಹಂತಗಳನ್ನು ಸರ್ಕಾರದೊಂದಿಗೆ ಈಗಾಗಲತೇ ದಿನಾಂಕ 3-4- 1997ರಂದು ಮಾಡಿಕೊಂಡಿರುವ ಪ್ರೇಂವರ್ಕ್ ಅಗ್ರಿಮೆಂಟ್ ಕಾರಾರಿನಂತೆ ಹತ್ತು ವರ್ಷಗಳಲ್ಲಿ ಪೂರ್ಣಗೊಳಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಲೋಕೋಪಯೋಗಿ ಇಲಾಖೆಯಲ್ಲಿ ಬಳಸದೇ ಇರುವ ವಸ್ತುಗಳ ವಿಲೇವಾರಿ

1053 (1051) ಶ್ರೀ ಎ.ಎಸ್. ಗುರುಸ್ವಾಮಿ (ಚಾಮುಂಡೇಶ್ವರಿ) : ಮಾನ್ಯ ಲೋಕೋಪಯೋಗಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲೋಕೋಪಯೋಗಿ ಇಲಾಖೆಯ ವಿವಿಧ ಉಗ್ರಾಣಗಳಲ್ಲಿ ಬಳಸಿದ ವಾಹನಗಳು ಮತ್ತು ಇತರ ಯಂತ್ರಸಾಮಗ್ರಿ ಕೊಳೆಯುತ್ತಿದೆ; ಇದರ ವಿಲೇವಾರಿಯಿಂದ ಸರ್ಕಾರಕ್ಕೆ ಲಭ್ಯವಾಗಬಹುದಾದ ಕೋಟಿಗಟ್ಟಲೆ ಆದಾಯ ದೊರೆಯದೇ ನಷ್ಟ ಉಂಟಾಗುತ್ತಿದೆ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ರೀತಿ ಅನುಪಯುಕ್ತ ವಸ್ತುಗಳನ್ನು ವಿಲೇವಾರಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಇವುಗಳ ಶೀಘ್ರ ವಿಲೇವಾರಿಗೆ ಇರುವ ನಿರ್ಬಂಧಗಳೇನು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಕೆಲವೊಂದು ಅನುಪಯುಕ್ತ ವಾಹನಗಳು ಯಂತ್ರಸಾಮಗ್ರಿಗಳು ಅನುಪಯುಕ್ತವಾಗಿ ದಾಸ್ತಾನಿನಲ್ಲಿದೆ.